**2ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ - 724/2017**
**ಚಾಸಾ - 14/ ಪ್ರಾಸಾ - 03**

| | |
|---|---|
| ಹೆಸರು | **ರಾಜೇಗೌಡ** |
| ತಂದೆಯ ಹೆಸರು | **ಚನ್ನೇಗೌಡ** |
| ವಯಸ್ಸು | **63** |
| ಉದ್ಯೋಗ | **ನಿವೃತ್ತ ಎ. ಎಸ್. ಐ** |
| ವಿಳಾಸ | **ವಾಜರ ಹಳ್ಳಿ** |

**ದಿನಾಂಕ:27-11-2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ-**

ನಾನು ದಿ.01-08-2016 ರಿಂದ ದಿ.31-05-2022 ವರೆಗೆ ತಾವರೆಕೆರೆ ಪೋಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕಾರ್ಯನಿರ್ವಹಿಸಿದ್ದೇನೆ.

ದಿನಾಂಕ 05-10-2016 ರಂದು ಬೆಳಗ್ಗೆ 7.15 ಗಂಟೆಯ ಸಮಯದಲ್ಲಿ ಪಿರ್ಯಾದುದಾರರು ಠಾಣೆಗೆ ಹಾಜರಾಗಿ ದೂರನ್ನು ನೀಡಿದ ಮೇರೆಗೆ ಠಾಣಾ ಮೊಕದ್ದಮೆ ನಂ.354/2016 ಎಂದು ನಮೂದಿಸಲಾಯಿತು. ಸದರಿ ಮೊಕದ್ದಮೆ ನಂ. ಕಲಂ 279, 337 ಮತ್ತು 304-ಎ ಐಪಿಸಿ ಮತ್ತು 187 ಐ. ಎಂ.ವಿ ಕಾಯಿದೆ ರೀತ್ಯ ಪ್ರಕರಣ ದಾಖಲು ಮಾಡಲಾಯಿತು. ಈಗ ಸಾಕ್ಷಿಗೆ ದೂರನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ದೂರನ್ನು ನಿಪಿ-5 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ಸದರಿ ದೂರಿನ ಮೇರೆಗೆ ಪ್ರಥಮ ವರ್ತಮಾನ ವರದಿಯನ್ನು ಮಾಡಲಾಯಿತು. ಈಗ ಸಾಕ್ಷಿಗೆ ಪ್ರಥಮ ವರ್ತಮಾನ ವರದಿಯನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿರುತ್ತಾರೆ. ಪ್ರಥಮ ವರ್ತಮಾನ ವರದಿಯನ್ನು ನಿಪಿ-6 ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು.

ಅದೇ ದಿನದಂದು ಬೆಳಗ್ಗೆ 8.15 ರಿಂದ 9 ಗಂಟೆಯವರೆಗೆ ಚಾಸಾ-1ರವರು ತೋರಿಸಿದ ಜಾಗದಲ್ಲಿ ನಿಪಿ-1ರಂತೆ ಪಂಚನಾಮೆಯನ್ನು ಚಾಸಾ-1ರಿಂದ 3 ರವರ ಸಹಿಯನ್ನು ಪಡೆದಕೊಂಡಿರುತ್ತೇನೆ. ಈಗ ಸಾಕ್ಷಿಗೆ ನಿಪಿ-01 ಅನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ

ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿ-1(ಸಿ) ಎಂದು ಗುರುತಿಸಲಾಯಿತು. ಪಂಚನಾಮೆಯನ್ನು ಮಾಡುವ ಸಮಯದಲ್ಲಿ ಕಚ್ಛಾ ನಕ್ಷೆಯನ್ನು ತಯಾರು ಮಾಡಲಾಯಿತು. ಈಗ ಸಾಕ್ಷಿಗೆ ಕಚ್ಛಾ ನಕ್ಷೆಯನ್ನು ತೋರಿಸಿದ್ದು, ಸಾಕ್ಷಿಯು ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಕಚ್ಛಾ ನಕ್ಷೆಯನ್ನು ನಿಪಿ-7 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು.

ಅದೇ ದಿನದಂದು ರಾಜರಾಜೇಶ್ವರಿ ಆಸ್ಪತ್ರೆಯ ಶವಾಗಾರದಲ್ಲಿ ಮೃತವ್ಯಕ್ತಿಯ ಶವತನಿಖೆಯನ್ನು ಚಾಸಾ-5 ರಿಂದ 7ರವರ ಸಮಕ್ಷಮದಲ್ಲಿ ಬೆಳಿಗ್ಗೆ 10.00 ರಿಂದ 12.00 ರವರೆಗೆ ಮಾಡಲಾಯಿತು. ಈಗ ಸಾಕ್ಷಿಗೆ ನಿಪಿ-02 ಅನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ದಿ.07-10-2016 ರಂದು ನಾನು ಅಪಘಾತ ಮಾಡಿ ಹೊರಟು ಹೋಗಿದ್ದ ವಾಹನವನ್ನು ಪತ್ತೆ ಮಾಡಿ ಠಾಣೆಗೆ ಹಾಜರುಪಡಿಸಿದ ಮೇರೆಗೆ ಬೆಳಗ್ಗೆ 9 ರಿಂದ 9.30ರ ಸಮಯದಲ್ಲಿ ಠಾಣಾ ಆವರಣದಲ್ಲಿ ಚಾಸಾ-4ರವರ ಸಮಕ್ಷಮದಲ್ಲಿ ದ್ವಿಚಕ್ರ ವಾಹನ ಸಂ.ಕೆಎ-06-ಇಕ್ಯೂ-2765 ನ್ನು ಅಮಾನತ್ತು ಮಾಡಿ ಪಂಚನಾಮೆಯನ್ನು ಮಾಡಲಾಯಿತು. ಈಗ ಸಾಕ್ಷಿಗೆ ಅಮಾನತ್ತು ಪಂಚನಾಮೆಯನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಅಮಾನತ್ತು ಪಂಚನಾಮೆ ನಿಪಿ-8 ಎಂದು ಸಾಕ್ಷಿಯ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು. ನಂತರ ಹೆಚ್ಚಿನ ತನಿಖೆಗೆ ಕಡತವನ್ನು ಚಾಸಾ-15 ರವರಿಗೆ ವರ್ಗಾವಣೆ ಮಾಡಲಾಯಿತು.

**ಪಾಟೀ ಸವಾಲು- ಆರೋಪಿಯ ಪರ ಶ್ರೀ. ವಿ. ಎಲ್. ಎನ್, ವಕೀಲರಿಂದ -**

ನಿಮ್ಮ ವ್ಯಾಪ್ತಿಗೆ ಬರುವ ಸ್ಥಳಗಳಲ್ಲಿ ಬೀಟ್ ಪೋಲೀಸರನ್ನು ನೇಮಕ ಮಾಡಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಯಾವುದಾದರೂ ಅಪಘಾತವಾದಾಗ ನಿಮಗೆ ಬೀಟ್ ಪೋಲೀಸರಿಂದ ಮಾಹಿತಿ ಬರುತ್ತದೆ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಬೀಟ್ ಪೋಲೀಸರಿಗೆ ಠಾಣೆಯಿಂದ ಒಂದು ಪುಸ್ತಕವನ್ನು ನೀಡಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸಾಕ್ಷಿಯು ಮುಂದುವರೆದು 2016 ನೇ ಇಸವಿಯಲ್ಲಿ ಸದರಿ ನಿಯಮ ಇತ್ತಾ ಎಂಬುವುದರ ಬಗ್ಗೆ

ತನಗೆ ಮಾಹಿತಿ ಇರುವುದಿಲ್ಲ ಎಂದು ನುಡಿದಿರುತ್ತಾರೆ. ಪೋಲೀಸ್ ಮ್ಯಾನ್ಯುಯಲ್ ಜಾರಿಗೆ ಬಂದ ದಿನಾಂಕದಿಂದಲೂ ಸದರಿ ನಿಯಮ ಇದೆ ಎಂದರೆ ಸಾಕ್ಷಿಯು ಗೊತ್ತಿಲ್ಲ ಎನ್ನುತ್ತಾರೆ. ಆ ದಿನ ಯಾವುದಾದರೂ ಘಟನೆ ಸಂಭವಿಸಿದರೆ ಸದರಿ ಪುಸ್ತಕದಲ್ಲಿ ನಮೂದಿಸಿ ಪಿ. ಐ ರವರಿಗೆ ಮಾಹಿತಿಯನ್ನು ನೀಡುತ್ತಾರೆ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

ನಿಪಿ-7ರಂತೆ ದೂರನ್ನು ನೀಡುವ ಸಮಯದಲ್ಲಿ ಚಾಸಾ-1ರವರ ಜೊತೆಯಲ್ಲಿ ಎಷ್ಟು ಜನ ಬಂದಿದ್ದರು ಎಂದು ನನಗೆ ನೆನಪಿಲ್ಲ. ಈಗ ಸಾಕ್ಷಿಗೆ ನಿಪಿ-6ನ್ನು ತೋರಿಸಿದ್ದು, ಅದರ ಕಲಂ. 12ರಲ್ಲಿ ಚಾಸಾ-1ರವರ ಸಹಿ ಇರುವುದಿಲ್ಲ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸದರಿ ಕಲಂ. ನಲ್ಲಿ ಚಾಸಾ1ರವರ ಸಹಿಯನ್ನು ಪಡೆದುಕೊಳ್ಳಲು ನಿಮಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಯಾವುದಾದರೂ ಕೃತ್ಯ ನಡೆದ ತಕ್ಷಣ ಸದರಿ ಸ್ಥ,ಳಕ್ಕೆ ಹೋದರೆ ಸ್ಪಷ್ಟವಾದ ಮಾಹಿತಿ ದೊರಕುತ್ತದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸಾಕ್ಷಿದಾರರಿಗೆ ಪಂಚನಾಮೆಗೆ ಸಹಕರಿಸುವಂತೆ ಹೇಳಿ ಪಂಚನಾಮೆಯನ್ನು ಮಾಡಿದ ದಿನಾಂಕದಂದೇ ನಾನು ನೋಟಿಸನ್ನು ನೀಡಿರುತ್ತೇನೆ. ಈ ಪ್ರಕರಣದಲ್ಲಿ ಹಾಜರುಪಡಿಸಿರುವ ಎಲ್ಲಾ ದಾಖಲೆಗಳನ್ನು ನೀವು ಸೃಷ್ಟಿ ಮಾಡಿರುತ್ತೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನೀವು ಮೃತರ ಕುಟುಂಬಕ್ಕೆ ಸಹಾಯ ಮಾಡುವ ಉದ್ದೇಶದಿಂದ ಚಾಸಾ-1ರವರಿಂದ ಸುಳ್ಳು ದೂರನ್ನು ದಾಖಲಸಿಕೊಂಡು ನಿಮಗೆ ಅನುಕೂಲ ಆಗುವಂತೆ ತನಿಖೆಯನ್ನು ಮಾಡಿ ಸುಳ್ಳು ಸಾಕ್ಷ್ಯಾ ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**2ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ,**
ಮಾಗಡಿ.